**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 72/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ02**

**ದಿನಾಂಕಃ** 12.12.2025 **ಸಿಡಬ್ಲ್ಯೂ02**

| | |
|---|---|
| ಹೆಸರು | ಶಿವಕುಮಾರ |
| ತಂದೆ ಹೆಸರು | ಬಸವರಾಜಪ್ಪ |
| ವಯಸ್ಸು | 33 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಜರೀಕಟ್ಟೆ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.1 ಮತ್ತು 3 ರವರ ಪರಿಚಯವಿದೆ. ಆರೋಪಿತರ ಪರಿಚಯವಿದೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಒಪ್ಪಿದ್ದು ಸದರಿ ದಾಖಲೆ ಸ್ಥಳ ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಿದ್ದು ಸಾಕ್ಷಿಯನ್ನು ನಿಪಿ.2 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಒಪ್ಪಿದ್ದು ಸದರಿ ದಾಖಲೆ ಕಚ್ಚಾ ನಕಾಶೆ ಆಗಿದ್ದು ಅದನ್ನು ಈಗಾಗಲೇ ನಿಪಿ.3 ಎಂದು ಗುರುತಿಸಿದ್ದು ಸಾಕ್ಷಿಯನ್ನು ನಿಪಿ.3 (ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಕುಣೆಬೆಳಕೆರೆ ಗ್ರಾಮದ ಪಿಕ್ ಅಪ್ ಚಾನಲ್ ಬಳಿ ಮಾಡಿರುತ್ತೇನೆ. ಸದರಿ ಸಹಿಯನ್ನು ಚಾಸಾ.1 ಹಾಗೂ ಆರೋಪಿತರ ನಡುವೆಯಾದ ಗಲಾಟೆ ವಿಚಾರಕ್ಕೆ ಮಾಡಿರುತ್ತೇನೆ. ಸದರಿ ದಾಖಲೆಗಳಿಗೆ ನಾನು ಮತ್ತು ಚಾಸಾ.3 ರವರು ಸಹಿ ಮಾಡಿರುತ್ತೇವೆ. ಸದರಿ ಸಂದರ್ಭದಲ್ಲಿ ಪೊಲೀಸರು ಪಂಚನಾಮೆ ಜರುಗಿಸಿ ಕಚ್ಚಾ ನಕಾಶೆ ತಯಾರಿಸಿ ಛಾಯ ಚಿತ್ರ ತೆಗೆದಿರುತ್ತಾರೆ. ಸಾಕ್ಷಿಯು ಗುರುತಿಸಿದ ಛಾಯ ಚಿತ್ರವನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿದೆ. ಪಂಚನಾಮೆಯನ್ನು ಬೆಳಿಗ್ಗೆ 1.00 ರಿಂದ 12.00 ರವರೆಗೆ ಜರುಗಿಸಿತ್ತಾರೆ. ಈ ಎಲ್ಲಾ ವಿಚಾರವಾಗಿ ಪೊಲೀಸರಿಗೆ ನಾನು ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಎಂ ಎಂ ವಕೀಲರಿಂದಃ**

ನನ್ನ ಊರು ಜರೀಕಟ್ಟೆ ಎಂದರೆ ಸರಿ. ಜರೀಕಟ್ಟೆಯಿಂದ ಪಿಕಅಪ್ ಚಾನಲ್ 4 ಕಿ ಮೀ ದೂರದಲ್ಲಿದೆ. ಪಿಕಅಪ್ ಚಾನಲ್ ಗೂ ಘಟನಾ ಸ್ಥಳಕ್ಕೂ 2 ಕಿ ಮೀ ದೂರದಲ್ಲಿದೆ. ಇನ್ನೊಂದು ಬಾರಿ ನ್ಯಾಯಾಲಯ ಸಾಕ್ಷಿಗೆ ಪ್ರಶ್ನೆ ಕೇಳಲಾಗಿ ಪಿಕಅಪ್ ಚಾನಲ್ ಪಕ್ಕದಲ್ಲಿ ಘಟನಾ ಸ್ಥಳ ಇದೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜರೀಕಟ್ಟೆ ಲಿಂಗೇಶ ಚಾಸಾ.6 ನನ್ನ

ಸಂಬಂಧಿಕ. ನಿಮ್ಮನ್ನು ಯಾರು ಕರೆದಿದ್ದರು ಎಂದರೆ ಸಾಕ್ಷಿಯು ನನ್ನನ್ನು ಯಾರು ಕರೆದಿಲ್ಲ ನಾನು ರಸ್ತೆಯಲ್ಲಿ ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. ನಾನು ಲಿಂಗೇಶಪ್ಪನವರ ಜಮೀನನ್ನು ಮಾಡುತ್ತಿದ್ದೆ. ಚಾಸಾ.1 ರವರ ತಂದೆಗೂ ಹಾಗೂ 1 ನೇ ಆರೋಪಿಗೂ ಬೀಜನ ವ್ಯವಹಾರ ಇದೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ.1 ರವರ ತಂದೆ ಬೀಜ ಗೊಬ್ಬರ ಮಾರುತ್ತಾರೆ ಎಂದರೆ ಸರಿ. ಬೀಜ ಗೊಬ್ಬರದ ವ್ಯವಹಾರದಲ್ಲಿ ಚಾಸಾ.1 ರವರ ತಂದಗೊ ಹಾಗೂ ಆರೋಪಿಗೂ ತೊಂದರೆ ಬಂದ ವಿಚಾರ ನನಗೆ ಗೊತ್ತಿಲ್ಲ. ಚಾಸಾ.1 ರವರ ತಂದೆ ಆರೋಪಿ ಅವಿದ್ಯಾವಂತ ನಾಗಿದ್ದರಿಂದ ಅವರ ಆಸ್ತಿಯನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆಸ್ತಿಯ ವಿಚಾರವಾಗಿ ಸಿವಿಲ್ ದಾವೆ ಸಲ್ಲಿಸಿದ ವಿಚಾರ ನನಗೆ ಚಾಸಾ.1 ರವರಿಂದ ತಿಳಿದಿರುತ್ತದೆ. ಚಾಸಾ.1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಆರೋಪಿತರ ವಿರುದ್ದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಘಟನಾ ಸ್ಥಳದಲ್ಲಿ ಪಂಚನಾಮೆ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಗೆ ನಾನು ಮತ್ತು ಚಾಸಾ.3 ರವರು ಸಹಿ ಮಾಡಿದ್ದೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.4 ರಲ್ಲಿ ಒಂದು ಬಣಿವೆ ಕಾಣುತ್ತಿದೆ ಎಂದರೆ ಸರಿ. ಸದರಿ ಬಣಿವೆ ಕುಣೆಬೆಳಕೆರೆಗೆ ಸಂಬಂದಪಟ್ಟದ್ದು ಎಂದರೆ ಸರಿ. ಕುಣೆಬೆಳಕೆರೆಯಿಂದ ಘಟನಾ ಸ್ಥಳಕ್ಕೆ ಅರ್ದ ಕಿ ಮೀ ಅಂತರವಿರಬಹುದು. ನಿಪಿ.4 ಘಟನಾ ಸ್ಥಳದಲ್ಲಿ ತೆಗೆದ ಛಾಯ ಚಿತ್ರ ಅಲ್ಲ ಎಂದರೆ ಸರಿಯಲ್ಲ. ನಾನು 10 ನೇ ತರಗತಿವರೆಗೆ ವಿದ್ಯಾಬ್ಯಾಸ ಮಾಡಿದ್ದೇನೆ. ನಿಪಿ.3 ನ್ನು ಕುಣೆಬೆಳಕೆರೆಯಲ್ಲಿ ತಯಾರಿಸಿರುತ್ತಾರೆ. ನಿಪಿ.3 ನ್ನು ಮಹೇಂದ್ರ ಎನ್ನುವ ಪೊಲೀಸರು ತಯಾರಿಸಿರುತ್ತಾರೆ. ಮಹೇಂದ್ರ ಎನ್ನುವವರು ಪೊಲೀಸರು. ಎಷ್ಟು ವರ್ಷದಿಂದ ನಿಮಗೆ ಅವರು ಪರಿಚಯ ಎಂದರೆ ಸಾಕ್ಷಿಯು ಅವತ್ತೆ ಪರಿಚಯ ಎಂದು ನುಡಿಯುತ್ತಾರೆ. ನಿಪಿ.3 ಮತ್ತು 4 ನನಗೆ ಸಂಬಂದಿಸಿದ್ದಲ್ಲ ಎಂದರೆ ಸರಿಯಲ್ಲ. ಪೊಲೀಸರು ನನಗೆ ನೋಟಿಸ್ ನೀಡಿಲ್ಲ ಎಂದರೆ ಸರಿಯಲ್ಲ. ನೋಟಿಸನ್ನು ಪೊಲೀಸರು ನನ್ನ ಬಳಿ ತೆಗೆದುಕೊಂಡು ಬಂದಿದ್ದರು. ಸದರಿ ಪೊಲೀಸರು ಹೆಸರು ಹನುಮಂತಪ್ಪ. ಸದರಿ ಹನುಮಂತಪ್ಪ ನನಗೆ ಪರಿಚಯವಿಲ್ಲ. ಸದರಿಯವರ ಹೆಸರನ್ನು ಫೋನಿನಲ್ಲಿ ಕೇಳಿಕೊಂಡಿರುತ್ತೇನೆ. ಕರೆಯನ್ನು ಯಾವ ಫೋನ ನಂಬರಿನಿಂದ ಯಾವ ನಂಬರಿಗೆ ಮಾಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ಸೃಷ್ಟಿ ಮಾಡಿದ ದಾಖಲೆಗೆ ಅನುಕೂಲವಾಗುವಂತೆ ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ಆರೋಪಿತರನ್ನು ನಾನು ಇದೇ ದಿನ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಅಂಶಗಳು ಅಸತ್ಯ ಎಂದರೆ ಸರಿಯಲ್ಲ. ಚಾಸಾ.1 ರವರು ಸೃಷ್ಟಿ ಮಾಡಿದ ಪ್ರಕರಣಕ್ಕೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆದಿಲ್ಲ, ಪಂಚನಾಮೆ ಜರುಗಿಸಿಲ್ಲ, ಕಚ್ಚಾ ನಕಾಶೆ ತಯಾರಿಸಿಲ್ಲ, ಯಾವುದೇ ಫೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ .**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ